ಮೂಲದಿಂದ ನೀರನ್ನು ಕೊಡಬೇಕೆಂದು ನಾವು ಏನು ಹೋರಾಟವನ್ನು ಮಾಡಿಕೊಂಡು ಬಂದಿದ್ದೇವೆ ಅವತ್ತು ಕೂಡ ಅವರು ನನ್ನ ಜೊತೆಗೆ ಇದ್ದು ಸಹಕರಿಸಿದ್ದಾರೆ. ಅವರು ಕೊನೆಯವರೆಗೂ ಒಂದು ದಿವಸವೂ ಕೂಡ ಅವರ ಜೀವಿತದ ಅವಧಿಯಲ್ಲಿ ರಾಗದ್ವೇಷಗಳಿಲ್ಲದೆ ರಾಜಕಾರಣವನ್ನು ಮಾಡಿದವರಾಗಿ–ದ್ದಾರೆ. ಅವರು ಒಂದು ರೀತಿಯಲ್ಲಿ ಅಜಾತಶತ್ರುವಾಗಿದ್ದರು, ಅವರು ಯಾರನ್ನೂ ಕೂಡ ದ್ವೇಷ ಮಾಡದ ರೀತಿಯಲ್ಲಿದ್ದರು. ಎಲ್ಲರಲ್ಲಿಯೂ ಕೂಡ ಪ್ರೀತಿ ವಿಶ್ವಾಸವನ್ನು ಮತ್ತು ಸ್ನೇಹವನ್ನು ಬಯಸಿ ಬದುಕಿದ್ದರೆನ್ನುವಂತಹ ಮಾತನ್ನು ಬಹಳ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಅವರು ನಿನ್ನೆಯ ದಿವಸ ಆಕಸ್ಮಿಕವಾಗಿ ಎದೆನೋವು ಬಂದು ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಿನ್ನೆ ಬೆಳಿಗ್ಗೆ ನಾನು ಹೋದ ಸ್ವಲ್ಪ ಹೊತ್ತಿಗೆ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಹಾಗಾಗಿ ನಾನು ನಿನ್ನೆಯ ದಿವಸ ಅವರ ಅಂತಿಮ ಸಂಸ್ಕಾರದ ಕಾರ್ಯಕ್ರಮದಲ್ಲಿ ಭಾಗವಹಿಸಿ ನಾನು ಸದನಕ್ಕೆ ಬರುವುದಕ್ಕಾಗಲಿಲ್ಲ ಎನ್ನು–ವಂಥಹ ಮಾತನ್ನು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವು ತಂದಿರುವಂಥಹ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಪಿ.ಎಂ. ರಂಗನಾಥ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರ.

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2013 ಅನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ–1)